ಕರ್ನಾಟಕ ವಿಧಾನ ಸಭೆ

401 ಶ್ರೀ ನರೇಂದ್ರಬಾಬು ಎನ್.ಎಲ್ (ಮಹಾಲಕ್ಷ್ಮಿ ಬಡಾವಣೆ)

ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

1) 2007ರಿಂದ ಇದುವರೆಗೆ ಆಹಾರ ಇಲಾಖೆಯ ಎಷ್ಟು ಉನ್ನತ ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಲೋಕಾಯುಕ್ತ ದಾಳಿಗೆ ಒಳಗಾಗಿದ್ದಾರೆ (ಪ್ರಕರಣವಾರು, ದಾಳಿವಾರು ವಿವರ ನೀಡುವುದು).

1. <u>ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ:</u>

2007ರಿಂದ ಇದುವರೆಗೆ 3 ಜನ ಸಿಬ್ಬಂದಿ ಲೋಕಾಯುಕ್ತ ದಾಳಿಗೆ ಒಳಗಾಗಿರುತ್ತಾರೆ.

(1) ಶ್ರೀ ಸೂರ್ಯಕಾಂತ ಬಿನ್ ಬಂಡೆಪ್ಪ ಪುಲ್ಹಾರೆ, ಆಹಾರ ನಿರೀಕ್ಷಕರು, ತಾಲ್ಲೂಕು ಕಛೇರಿ, ಅಳಂದ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ.

ಸದರಿ ನೌಕರರು ತಮ್ಮ ಎಲ್ಲಾ ಚಿಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಸಂಪತ್ತು ಹೊಂದಿರುತ್ತಾರೆ ಎಂಬ ನಂಬಲರ್ಹ ಮಾಹಿತಿಯ ಆಧಾರದ ಮೇರೆಗೆ ಸದರಿ ನೌಕರರ ವಿರುದ್ಧ ಗುಲ್ಬರ್ಗಾ ಜಿಲ್ಲೆ ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:5/2008 ಕಲಂ 13(1)(ಇ) ಸಹವಾಚನ 13(2) ಭ್ರಷ್ಟಾಚಾರ ನಿರೋಧ ಕಾಯ್ದೆ 1988ರ ರೀತ್ಯಾ ದಿನಾಂಕ 26.03.2008ರಂದೇ ಪ್ರಕರಣವನ್ನು ದಾಖಲಿಸಿರುತ್ತಾರೆ.

(2) ಶ್ರೀ ವೆಂಕಟರಮಣಸ್ವಾಮಿ, ವ್ಯವಸ್ಥಾಪಕರು, ಉಪನಿರ್ದೇಶಕರ ಕಛೇರಿ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಪಶ್ಚಿಮ ವಲಯ, .ಬೆಂಗಳೂರು.

(3) ಶ್ರೀ ಎಂ.ಗೋಪಾಲಪ್ಪ, ಸಹಾಯಕ ನಿಯಂತ್ರಕರು, ಸಂಚಾರಿದಳ–1, ಬೆಂಗಳೂರು

ಇವರ ವಿರುದ್ಧ ಪ್ರಕರಣ ಸಂಖ್ಯೆ: 61/2008 ದಿನಾಂಕ 10.10.2008ರಂದು ಬೆಂಗಳೂರಿನಲ್ಲಿ ದಾಖಲಾಗಿದೆ.

2) ಪ್ರತಿಯೊಂದು ಪ್ರಕರಣಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು (ಪ್ರಕರಣವಾರು ವಿವರ ನೀಡುವುದು)

I. <u>ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ:</u>

(1) ಶ್ರೀ ಸೂರ್ಯಕಾಂತ ಬಿನ್ ಬಂಡಪ್ಪ ಪುಲ್ಹಾರ, ಆಹಾರ ನಿರೀಕ್ಷಕರು, ತಾಲ್ಲೂಕು ಕಛೇರಿ ಆಳಂದ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ, ಇವರನ್ನು ಆಯುಕ್ತರ ಕಛೇರಿಯ ದಿನಾಂಕ 24.4.2008ರ ಆದೇಶದಂತೆ ಸದರಿ ನೌಕರರ ವಿರುದ್ಧ

ಲೋಕಾಯುಕ್ತ ದಾಳಿ ಪ್ರಕರಣದ ತನಿಖೆಯನ್ನು ಬಾಕಿ ಇರಿಸಿ ಸೇವೆಯಿಮದ ಅಮಾನತ್ತಿನಲ್ಲಿಡಲಾಗಿರುತ್ತದೆ.

ಆಯುಕ್ತರ ಕಛೇರಿಯ ದಿನಾಂಕ 7.7.2008ರ ಆದೇಶದಂತೆ ಸದರಿ ನೌಕರರ ವಿರುದ್ಧ ಲೋಕಾಯುಕ್ತರ ದಾಳಿ ಪ್ರಕರಣದ ತನಿಖೆಯನ್ನು ಬಾಕಿ ಇರಿಸಿ ಅಮಾನತ್ತು ತೆರವುಗೊಳಿಸಿ ತಾಲ್ಲೂಕು ಕಛೇರಿ ಬಸವಕಲ್ಯಾಣ ತಾಲ್ಲೂಕು, ಬೀದರ್ ಜಿಲ್ಲೆ ಇಲ್ಲಿ ಖಾಲಿ ಇರುವ ಆಹಾರ ನಿರೀಕ್ಷಕರ ಹುದ್ದೆಗೆ ಪುನರ್ ನೇಮಕ ಮಾಡಲಾಗಿರುತ್ತದೆ.

(2) ಶ್ರೀ ವೆಂಕಟರಮಣಸ್ವಾಮಿ, ವ್ಯವಸ್ಥಾಪಕರು, ಉಪನಿರ್ದೇಶಕರ ಕಛೇರಿ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಪಶ್ಚಿಮ ವಲಯ, ಬೆಂಗಳೂರು, ಇವರನ್ನು ಆಯುಕ್ತರ ಕಛೇರಿಯ ದಿನಾಂಕ 7.11.2008ರ ಆದೇಶದಂತೆ ಸದರಿ ನೌಕರರ ವಿರುದ್ಧ ಲೋಕಾಯುಕ್ತ ದಾಳಿ ಪ್ರಕರಣದ ತನಿಖೆಯನ್ನು ಬಾಕಿ ಇರಿಸಿ ಸೇವೆಯಿಂದ ಅಮಾನತ್ತಿನಲ್ಲಿಡಲಾಗಿರುತ್ತದೆ.

(3) ಶ್ರೀ ಎಲ್.ನಾಗಲಿಂಗಯ್ಯ, ಆಹಾರ ನಿರೀಕ್ಷಕರು, ಉಪನಿರ್ದೇಶಕರ ಕಛೇರಿ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಕೇಂದ್ರ ವಲಯ, ಬೆಂಗಳೂರು, ಇವರನ್ನು ಆಯುಕ್ತರ ಕಛೇರಿಯ ದಿನಾಂಕ 13.01.2009ರ ಆದೇಶದಂತೆ ಸದರಿ ನೌಕರರ ವಿರುದ್ಧ ಲೋಕಾಯುಕ್ತ ದಾಳಿ ಪ್ರಕರಣದ ತನಿಖೆಯನ್ನು ಬಾಕಿ ಇರಿಸಿ ಅಮಾನತ್ತಿನಲ್ಲಿಡಲಾಗಿದೆ.

II.

(1)

(2) ಶ್ರೀ ಎಂ.ರಾಮಕೃಷ್ಣಯ್ಯ, ಸಹಾಯಕ ನಿಯಂತ್ರಕರು, ಹಾಗೂ ಶ್ರೀ ಆರ್.ಬಿ.ಚಂದಾವರ್, ದೈಹಿಕ ಸಹಾಯಕರು ಇವರುಗಳನ್ನು ಅಮಾನತ್ತಿನಲ್ಲಿಡಲಾಗಿತ್ತು. ನಂತರ ಶ್ರೀ ಎಂ.ರಾಮಕೃಷ್ಣಯ್ಯ, ಇವರ ಅಮಾನತ್ತನ್ನು ತೆರವುಗೊಳಿಸಿ ಕೆಲಸಕ್ಕೆ ಪುನರ್ ನೇಮಕ ಮಾಡಲಾಗಿದೆ. ಶ್ರೀ ಆರ್.ವಿ.ಚಂದಾವರ್, ದೈಹಿಕ ಸಹಾಯಕರು, ಇವರು ದಿನಾಂಕ 30.9.2007ರಂದು ವಯೋ ನಿವೃತ್ತಿ ಹೊಂದಿರುತ್ತಾರೆ, ಪ್ರಕರಣವು ಲೋಕಾಯುಕ್ತದಲ್ಲಿ ಬಾಕಿ ಇದೆ.

(3) ಶ್ರೀ ಎಂ.ಗೋಪಾಲಪ್ಪ, ಸಹಾಯಕ ನಿಯಂತ್ರಕರು, ಇವರನ್ನು ಸರ್ಕಾರಿ ಸಂಖ್ಯೆ:ಆನಾಕ 63 ಕಾಮಾಹೇ 2008 (ಭಾಗ) ಬೆಂಗಳೂರು, ದಿನಾಂಕ 26.12.2008ರಲ್ಲಿ ಅಮಾನತ್ತಿನಲ್ಲಿಡಲಾಗಿದೆ. ಹಾಗೂ ಅವರು ಅಮಾನತ್ತಿನಲ್ಲಿ ಮುಂದುವರೆದಿದ್ದಾರೆ. ಲೋಕಾಯುಕ್ತದಲ್ಲಿ ಬಾಕಿ ಇದೆ.

ಸಂಖ್ಯೆ: ಆನಾಕ 40 2009

(ಹೆಚ್.ಹಾಲಪ್ಪ)
ಆಹಾರ, ನಾಗರೀಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು,